ವಿಶ್ವವಾಣಿ
ಬೆಂಗಳೂರು
vishwavani.news
13.02.2018 ಮಂಗಳವಾರ

ಸಂಪಾದಕೀಯ

ಮುಂದುವರೆದ ಅನ್ಯಾಯ

ಕರ್ನಾಟಕದ ಬಗ್ಗೆ ಕೇಂದ್ರ ಸರಕಾರದ ಮಲತಾಯಿ ಧೋರಣೆ ಮತ್ತೆ ಮುಂದುವರಿದಿದೆ. ರಾಜ್ಯದ ಸ್ಮಾರ್ಟ್ ಸಿಟಿಗಳ ಅಭಿವೃದ್ಧಿ ಯೋಜನೆಗೆ ಕೇವಲ 836 ಕೋಟಿ ರುಪಾಯಿ ಬಿಡುಗಡೆ ಮಾಡಿದೆ. ಆದರೆ ನೆರೆಯ ಮಹಾರಾಷ್ಟ್ರಕ್ಕೆ 1,378 ಕೋಟಿ ಮತ್ತು ಮಧ್ಯಪ್ರದೇಶಕ್ಕೆ 948 ಕೋಟಿ ರುಪಾಯಿ ಕೊಟ್ಟಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಇರುವುದಕ್ಕೂ ಕೇಂದ್ರ ಸರಕಾರ ಈ ಅನುದಾನ ಬಿಡುಗಡೆಯಲ್ಲಿ ತಾರತಮ್ಯ ಮೆರೆದಿರುವುದಕ್ಕೂ ಸಂಬಂಧ ಇಲ್ಲ ಎಂದು ಅಷ್ಟು ಸುಲಭವಾಗಿ ಹೇಳಲು ಸಾಧ್ಯವಿಲ್ಲ. ಒಂದೊಮ್ಮೆ ಕರ್ನಾಟಕದಲ್ಲಿ ಬಿಜೆಪಿ ಸರಕಾರ ಇದ್ದಿದ್ದರೆ ಕೇಂದ್ರ ಸರಕಾರ ಇದೇ ನೀತಿ ಅನುಸರಿಸುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಈವರೆಗೂ ನಾನಾ ಅನುದಾನಗಳ ನೀಡಿಕೆಯಲ್ಲೂ ಇದೇ ಪಕ್ಷಪಾತವನ್ನು ಕರ್ನಾಟಕ ಅನುಭವಿಸಿದೆ. ಕರ್ನಾಟಕ ಈ ದೇಶದ ಒಂದು ಭಾಗ. ನರೇಂದ್ರ ಮೋದಿ ಅವರು ಇಡೀ ದೇಶಕ್ಕೆ ಪ್ರಧಾನಿ. ಬರೀ ಬಿಜೆಪಿ ಸರಕಾರ ಅಸ್ತಿತ್ವದಲ್ಲಿ ಇರುವ ರಾಜ್ಯಗಳಿಗೆ ಮಾತ್ರ ಅವರು ಪ್ರಧಾನಿ ಅಲ್ಲ. ಹೀಗಾಗಿ ಪ್ರಗತಿ ವಿಚಾರದಲ್ಲಿ ಪಕ್ಷ ರಾಜಕಾರಣ ಬೆರೆಸುವುದು ವಿಹಿತವಲ್ಲ.

ಕರ್ನಾಟಕ ಅದೇನು ತಪ್ಪು ಮಾಡಿದೆ ಅಂತ ಇಂಥ ತಾರತಮ್ಯ ಅನುಭವಿಸಬೇಕು? ಇಲ್ಲಿರುವ ಜನ ಈ ದೇಶದ ಪ್ರಜೆಗಳಲ್ಲವೇ? ಎಲ್ಲವನ್ನೂ ಪಕ್ಷ ರಾಜಕಾರಣದ ಕಣ್ಣಿಂದಲೇ ಏಕೆ ನೋಡಬೇಕು? ಕರ್ನಾಟಕದಲ್ಲಿ ಮೊದಲಿಂದಲೂ ಒಂದು ಪ್ರತೀತಿ ಇದೆ. ಹೆಚ್ಚಿನ ಸಂದರ್ಭಗಳಲ್ಲಿ ಕರ್ನಾಟಕ ಮತ್ತು ಕೇಂದ್ರ ಸರಕಾರದಲ್ಲಿ ವಿಭಿನ್ನ ಸರಕಾರಗಳು ಅಧಿಕಾರ ನಡೆಸಿವೆ. ಕರ್ನಾಟಕದ ಜನ ರಾಜಕೀಯವಾಗಿ ಪ್ರಬುದ್ಧರಿದ್ದಾರೆ. ರಾಜಕೀಯದಲ್ಲಿ ಯಾವುದೇ ಭಾವಾವೇಶ ಬೆರೆಸುವುದಿಲ್ಲ. ಹೀಗಾಗಿ ಅದು ಇಡೀ ದೇಶದ ರಾಜಕಾರಣದಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತದೆ. ಆದರೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಸರಕಾರಗಳು ಅದು ಬಿಜೆಪಿ ಇರಲಿ, ಕಾಂಗ್ರೆಸ್ ಇರಲಿ ಮಲತಾಯಿ ಕಣ್ಣುಗಳಿಂದಲೇ ನೋಡುತ್ತಿರುವುದರಿಂದ ಕರ್ನಾಟಕಕ್ಕೆ ಮೊದಲಿಂದಲೂ ಅನ್ಯಾಯವಾಗುತ್ತಲೇ ಬಂದಿದೆ. ನೆಲ, ಜಲ, ಭಾಷೆ, ಪ್ರಗತಿ ಎಲ್ಲ ವಿಚಾರಗಳಲ್ಲೂ ಇದರ ಅನುಭವವಾಗಿದೆ. ಮಹದಾಯಿ ವಿವಾದ ಇತ್ತೀಚಿನದು. ಸ್ಮಾರ್ಟ್ ಸಿಟಿ ಅನುದಾನದ ಅನ್ಯಾಯ ಹೊಸ ಸೇರ್ಪಡೆ. ಈ ಪರಂಪರೆಗೆ ತೆರೆ ಎಳೆಯಲು ಎಲ್ಲ ರಾಜಕೀಯ ಪಕ್ಷಗಳೂ ಇಚ್ಛಾಶಕ್ತಿ ಪ್ರದರ್ಶಿಸಬೇಕು. ದೇಶದ ಪ್ರಗತಿ ರಾಜಕೀಯಕ್ಕಿಂತಲೂ ಮಿಗಿಲು ಎಂಬುದನ್ನು ಸಾಬೀತು ಮಾಡಬೇಕು.

ಕಾಶ್ಮೀರದ ಕಳವಳ

ಕಾಶ್ಮೀರದ ಗಡಿ ಪ್ರದೇಶಗಳಲ್ಲಿ ಪಾಕಿಸ್ತಾನ ಪ್ರಾಯೋಜಿತ ಉಗ್ರರ ನುಸುಳು ದಾಳಿ ಅವ್ಯಾಹತವಾಗಿ ಮುಂದುವರಿದಿರುವುದು ಕಳವಳಕ್ಕೆ ಎಡೆಮಾಡಿಕೊಟ್ಟಿದೆ. ಎರಡು ದಿನಗಳ ಹಿಂದಷ್ಟೇ ಸುಂಜ್ವಾನ ಸೇನಾ ಶಿಬಿರದ ಮೇಲೆ ದಾಳಿಗೈದು ಐವರು ಭಾರತೀಯ ಯೋಧರನ್ನು ಹತ್ಯೆ ಮಾಡಿದ ಬೆನ್ನಲ್ಲಿಯೇ ಹಲವು ಕಡೆಗಳಲ್ಲಿ ಸೇನೆಯನ್ನು ಕೆಣಕುವ ಪ್ರಯತ್ನದಲ್ಲಿ ಉಗ್ರರು ನಿರತರಾಗಿದ್ದಾರೆ. ಕಳೆದ ವರ್ಷವಷ್ಟೇ ಪಾಕ್‌ನ ಗಡಿದಾಟಿ ನಿರ್ದಿಷ್ಟ ದಾಳಿ ಮೂಲಕ ಉಗ್ರ ಸಂಘಟನೆಗಳ ಹುಟ್ಟಡಗಿಸಲಾಗಿತ್ತಾದರೂ ಪಾಕಿಸ್ತಾನ ಇದರಿಂದ ಯಾವುದೇ ಪಾಠ ಕಲಿತಂತೆ ಕಾಣುತ್ತಿಲ್ಲ. ಭಾರತದ ಗಡಿಯನ್ನು ಪ್ರಕ್ಷುಬ್ಧವಾಗಿಸುವ ಅದರ ಹವಣಿಕೆ ಇನ್ನೂ ನಿಂತಿಲ್ಲ. ಸಹಜವಾಗಿಯೇ ಕೇಂದ್ರ ಈ ದಾಳಿಗಳನ್ನು ತೀರಾ ಗಂಭೀರವಾಗಿ ಪರಿಗಣಿಸಿದೆ. ಗೃಹ ಸಚಿವ ರಾಜನಾಥ ಸಿಂಗ್ ಅವರು ಉನ್ನತ ಅಧಿಕಾರಿಗಳೊಂದಿಗೆ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ. ಇದರ ಬೆನ್ನಿಗೆ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಖುದ್ದು ಸುನ್ಜ್ವಾನ ಸೇನಾ ಶಿಬಿರಕ್ಕೆ ಭೇಟಿ ನೀಡಿ ವಿವರ ಪಡೆದುಕೊಂಡಿದ್ದಾರೆ. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯನ್ನು ತಡೆಯಲು ಸರಕಾರ ರಾಜತಾಂತ್ರಿಕ ಮಟ್ಟದಲ್ಲಿ ಏನೆಲ್ಲ ಒತ್ತಡ ಹಾಕಲು ಸಾಧ್ಯವೋ ಅದನ್ನು ಜರೂರಾಗಿ ಮಾಡಬೇಕಿದೆ. ಅಮೆರಿಕ ಸಹ ತನ್ನ ಪಾಕಿಸ್ತಾನ ಪರವಾದ ಧೋರಣೆಯಲ್ಲಿ ಭಾರೀ ಬದಲಾವಣೆ ತಂದಿರುವ ಹಿನ್ನೆಲೆಯಲ್ಲಿ ಉದ್ಭವವಾಗಿರುವ ಪರಿಸ್ಥಿತಿಯನ್ನು ಭಾರತ ಗರಿಷ್ಠ ಲಾಭಕ್ಕೆ ಬಳಸಿಕೊಳ್ಳಬೇಕಿದೆ. ಈಗಾಗಲೇ ಗೃಹ ಸಚಿವ ರಾಜನಾಥ್ ಸಿಂಗ್ ಅವರು ಗಡಿಯಾಚೆಯಿಂದ ಒಂದು ಗುಂಡು ಬಂದರೆ ನಮ್ಮಿಂದ ನೂರು ಗುಂಡು ಹಾರುತ್ತವೆ ಎಂದು ಪಾಕಿಸ್ತಾನಕ್ಕೆ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ. ಒಂದ ರೀತಿಯಲ್ಲಿ ಇದು ಸರಕಾರದ ನಿಲುವೇ ಆಗಿದೆ. ಕೇಂದ್ರದ ಈ ಗಟ್ಟಿ ನಿಲುವನ್ನು ರಾಜ್ಯ ಸರಕಾರವೂ ತೋರಬೇಕಿದೆ. ಕಾಶ್ಮೀರದಲ್ಲಿ ಆಡಳಿತದಲ್ಲಿರುವ ಮೆಹಬೂಬಾ ಮುಫ್ತಿ ಅವರ ಪಿಡಿಪಿ ಸರಕಾರ ಪ್ರತ್ಯೇಕತಾವಾದಿಗಳ ಪರ ಮೃದು ಧೋರಣೆ ಹೊಂದಿರುವುದು ಬಹಿರಂಗ ಸತ್ಯ. ಈ ಮಧ್ಯೆ ಭಾರತದ ಪ್ರತಿದಾಳಿ ಸಾಮರ್ಥ್ಯ ಅರಿತಿರುವ ಪಾಕಿಸ್ತಾನ ಯಾವುದೇ ದುಸ್ಸಾಹಸಕ್ಕೆ ಕೈಹಾಕದಂತೆ ಎಚ್ಚರಿಕೆ ನೀಡಿದೆ. ಆದರೆ ಈ ಎಚ್ಚರಿಕೆಯನ್ನು ಭಾರತ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಏಕೆಂದರೆ ಆ ದೇಶದ ಕುಯುಕ್ತಿ ಜಗತ್ತಿಗೇ ಗೊತ್ತಿದೆ. ಇದಕ್ಕಾಗಿ ವಿಶ್ವಸಂಸ್ಥೆಯಂತಹ ಜಾಗತಿಕ ವೇದಿಕೆಗಳನ್ನು ಪರಿಣಾಮಕಾರಿ ಯಾಗಿ ಬಳಸಿಕೊಂಡು ಪಾಕಿಸ್ತಾನದ ಬಣ್ಣ ಇನ್ನಷ್ಟು ಬಯಲು ಮಾಡುವ ಅಥವಾ ಅಲ್ಲಿನ ಉಗ್ರ ಶಿಬಿರಗಳ ಮೇಲೆ ಸಂಘಟಿತ ದಾಳಿಗೆ ಇರಬಹುದಾದ ಅವಕಾಶಗಳನ್ನು ಪರಾಂಬರಿಸುವುದು ಒಳಿತು. ಈ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಉಪೇಕ್ಷೆ ಸಲ್ಲ.

ಚಿತ್ರಸ್ಫೂರ್ತಿ

ಕೊನೆಗೂ ಮುಖ್ಯವೆನಿಸುವುದು ನಿಮ್ಮ ಬಗ್ಗೆ ನೀವೇನು ಅಂದುಕೊಳ್ಳುವಿರಿ ಎಂಬುದು !

ಕಾಕಾ ಹೋಟ್ಲು


ಧೀರು
ಹೈಟೆಕ್ ಸ್ಲಂಗಳಿಗಷ್ಟೇ ಬಿಜೆಪಿ ಮುಖಂಡರು ಭೇಟಿ ಕೊಡ್ತಾವ್ರೆ ಅಂತ ಸಚಿವ ರಾಮಲಿಂಗಾರೆಡ್ಡಿ ಅಣಕಿಸವ್ರಂತೇ?
ಓಹ್, ಸ್ಲಂಗಳಲ್ಲೂ ಹೈಟೆಕ್, ಲೋಟೆಕ್ ಅಂತ ಡಿವಿಜನ್ ಐತೇನ್ಲಾ?!
ಸುಧೀರು

ಬೆಟ್ಟ ಕರೆಯುತಿಹುದು ನನ್ನ, ಮುಗಿಲು ತನ್ನ ಹತ್ತಿರ ಯಾವುದುಂಟು ಅಣ್ಣ ಇಲ್ಲಿ ಜೀವವೇರದೆತ್ತರ?

ರೋಹಿತ್ ಚಕ್ರತೀರ್ಥ
ಲೇಖಕರು, ಅಂಕಣಕಾರರು

ಚುನಾವಣೆ ಎಂದರೇನು? ಯೇನಕೇನ ಪ್ರಕಾರೇಣ ಅಧಿಕಾರ ಹಿಡಿಯಲೇಬೇಕೆಂದು ಮೂರೂ ಬಿಟ್ಟ ರಾಜಕಾರಣಿಗಳು ಶರಂಪರ ಕಿತ್ತಾಡಿ ರಾಡಿ ಎಬ್ಬಿಸುವ ಮಹಾಮೇಳ. ಮಹಾಮಸ್ತಕಾಭಿಷೇಕ ಎಂದರೆ? ತನಗೆ ರಾಜ್ಯಾಧಿಕಾರ ಬೇಡ ಎಂದು ವೈರಾಗ್ಯ ತಾಳಿ, ಸುಖಸಂಪತ್ತುಗಳೆಲ್ಲವನ್ನೂ ಅಣ್ಣನ ಉಡಿಯಲ್ಲಿಟ್ಟು ದಿಟ್ಟನಾಗಿ ನೆಟ್ಟನೆ ನಡೆದು ಬೆಟ್ಟದಲ್ಲಿ ನಿಂತವನ ಶಿರಕ್ಕೆ ಹಾಲು, ಜೇನು, ಸಕ್ಕರೆ ಹುಯ್ಯುವ ಅರ್ಥಪೂರ್ಣ ಆಚರಣೆ. ಎರಡೂ ಘಟನೆಗಳು ಕರ್ನಾಟಕದಲ್ಲಿ ಎರಡು ತಿಂಗಳ ಆಸುಪಾಸಿನಲ್ಲಿ ಒಟ್ಟೊಟ್ಟಿಗೆ ಸಂಭವಿಸುತ್ತಿರುವುದು ಮಾತ್ರ ಒಂದು ಕಾಕತಾಳೀಯ ವಿಪರ್ಯಾಸ!

ಬಾಹುಬಲಿಯ ಕತೆ ನಮಗೆಲ್ಲ ಗೊತ್ತು. ಆದಿ ತೀರ್ಥಂಕರ ವೃಷಭದೇವನ ಮಕ್ಕಳಾದ ಭರತ ಬಾಹುಬಲಿಯ ನಡುವೆ ನಡೆದ ಯುದ್ಧದ ಸಂಗತಿಯೂ ಗೊತ್ತು ನಮಗೆ. ವೃಷಭನಾಥರಿಗೆ ನೂರು ಜನ ಮಕ್ಕಳು. ಇಬ್ಬರು ಹೆಂಡಿರಲ್ಲಿ ಮೊದಲನೆಯಾಕೆಯ ಹೊಟ್ಟೆಯಲ್ಲಿ 98 ಮಂದಿ ಗಂಡುಮಕ್ಕಳು ಹುಟ್ಟಿದರೆ ಎರಡನೆಯವಳಿಗೆ ಹುಟ್ಟಿದವರು ಇಬ್ಬರು – ಒಂದು ಗಂಡು, ಒಂದು ಹೆಣ್ಣು. ಭರತನನ್ನು ಹೆತ್ತಾಕೆ ಪಟ್ಟಮಹಿಷಿಯಾದರೆ ಬಾಹುಬಲಿಯ ತಾಯಿ ಆಕೆಯ ಸವತಿ; ಕಿರಿಯಾಕೆ. ಒಂದು ದಿವ್ಯ ಗಳಿಗೆಯಲ್ಲಿ ವೃಷಭನಾಥನಿಗೆ ವೈರಾಗ್ಯ ಹುಟ್ಟಿತು; ರಾಜ್ಯಭಾರದ ಜವಾಬುದಾರಿಯನ್ನು ಮಕ್ಕಳ ಹೆಗಲಿಗೆ ಹಾಕಿ, ಆತ ಕಾಡಿಗೆ ನಡೆದೇಬಿಟ್ಟ. ಮಕ್ಕಳು ತಮ್ಮ ಪಾಲಿಗೆ ಬಂದದ್ದನ್ನು ಸಂತೃಪ್ತಿಯಿಂದ ನೋಡಿಕೊಂಡು ಆಳಿಕೊಂಡು ಸುಖವಾಗಿದ್ದರು. ಆದರೆ ಅವರಲ್ಲೊಬ್ಬನಾದ ಭರತನಿಗೆ ಮಾತ್ರ ಆಸೆಯ ಕುಡಿ ಒಡೆಯಿತು. ಒಡೆದ ಮೊಳಕೆ ದಾಂಗುಡಿಯಿಟ್ಟು ಮೈಮನಸ್ಸನ್ನೆಲ್ಲ ಹಬ್ಬಿತು. ಅಲೆಗ್ಸಾಂಡರಿನಿಗಿದ್ದಂಥ ಆಕಾಂಕ್ಷೆ ಭರತನಲ್ಲೂ ವ್ಯಾಪಿಸಿತು. ಷಟ್‌ಖಂಡಗಳನ್ನು ಗೆದ್ದುಬರಲು ಹೊರಟ. ತನ್ನ ಯಂತ್ರಾಗಾರದಲ್ಲಿದ್ದ ಚಕ್ರರತ್ನವೆಂಬ ಅದ್ಭುತ, ಅಪಾಯಕಾರಿ ಅಸ್ತ್ರವನ್ನೂ ಜೊತೆಗಿಟ್ಟುಕೊಂಡ. ಚಕ್ರರತ್ನ ಹೋದಲ್ಲೆಲ್ಲ ರಾಜರು ಪ್ರತಿರೋಧವನ್ನೇ ತೋರದೆ ಶರಣಾದರು. ಭೂಮಂಡಲದ ಸಮಸ್ತ ಭಾಗಗಳೂ ಭರತನ ಮುಷ್ಟಿಯೊಳಗೆ ಕೂತವು. ಹಾಗೆ ದಿಗ್ವಿಜಯ ಹೊರಟವನು ಒಂದು ವೃತ್ತ ಪೂರ್ಣವಾಗಿಸುತ್ತ ವಾಪಸು ಬರುವಾಗ ತನ್ನ ತಮ್ಮಂದಿರನ್ನೂ ಬಿಡದೆ, ಶರಣಾಗಲು ತಿಳಿಸಿ, ಅವರ ರಾಜ್ಯಗಳನ್ನೂ ಬಾಚಿಕೊಂಡ. ಅಣ್ಣನಲ್ಲೇನು ಯುದ್ಧದ ಮಾತು ಎಂದು ಅವರೆಲ್ಲರೂ ತಂತಮ್ಮ ರಾಜ್ಯಗಳನ್ನು ಬಿಟ್ಟುಕೊಟ್ಟು ಅಪ್ಪಯ್ಯನಾದ ವೃಷಭನಾಥನ ಬಳಿಗೆ ಮುಕ್ತಿಮಾರ್ಗದ ಪಥಿಕರಾಗಿ ಹೋಗಿಬಿಟ್ಟರು. ಆದರೆ ಅಣ್ಣನ ಸೊಕ್ಕು ಮುರಿಯಲು ನಿಂತಿದ್ದನೊಬ್ಬ ತಮ್ಮ – ಬಾಹುಬಲಿ! ರಾಜ್ಯವನ್ನು ಧಾರೆಯೆರೆದವನು ತಂದೆ. ಅದರಲ್ಲಿ ಈ ಭರತನದೇನು ಪುಕಾರು? ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳುಂ ಪಂಥಮುಂಟೇ? ಅವನು ಕೇಳಿದನೆಂದು ತರ್ಪಣ ಕೊಟ್ಟುಬಿಡಲು ನಾನು ಉಳಿದ ತಮ್ಮಂದಿರಂತಲ್ಲ; ಗೆಲ್ಲುವ ಆಸೆಯಿದ್ದರೆ ಗೆದ್ದು ಪಡೆಯಲಿ! ಬಾಹುಬಲಿ ಹೂಂಕರಿಸಿದ.

ಇಬ್ಬರ ದೈತ್ಯಸೈನ್ಯಗಳು ಹೋರಿ ಸಾವಿರಸಂಖ್ಯೆಯ ಸೈನಿಕರು ಹತರಾಗುವ ಬದಲು, ಅಣ್ಣತಮ್ಮ ಇಬ್ಬರೇ ಹೋರಲಿ; ಗೆದ್ದವರು ಚಕ್ರವರ್ತಿಗಳಾಗಲಿ ಎಂಬ ವ್ಯವಸ್ಥೆಯಾಯಿತು. ಅದರಂತೆ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಾದವು. ಮೂರರಲ್ಲೂ ಗೆದ್ದವನು ಕಿರಿಯನಾದ ಬಾಹುಬಲಿಯೇ! ಮಲ್ಲಯುದ್ಧದ ಕೊನೆಯಲ್ಲಿ ತನ್ನಣ್ಣನನ್ನು ಎತ್ತಿಹಿಡಿದಿದ್ದ ಬಾಹುಬಲಿ, ಹಾಗೇ ಆ ದೇಹವನ್ನು ತಿರುಗಿಸಿ ಬಿಸುಟಿದ್ದರೆ ಅಥವಾ ನೆಲಕ್ಕೆ ಒಗೆದಿದ್ದರೆ... ಆ ಕ್ಷಣದಲ್ಲೇ ಸಮಸ್ತ ಭೂಮಂಡಲದ ಮಹಾಚಕ್ರವರ್ತಿಯಾಗಿಬಿಡಬಹುದಿತ್ತು. ಆದರೆ ಆ ಸಂದರ್ಭದಲ್ಲೇ ಬಾಹುಬಲಿಗೆ ಅವರ್ಣನೀಯ ಮನೋಕ್ಲೇಶ ಆವರಿಸಿಕೊಂಡುಬಿಟ್ಟಿತು. ರಾಜ್ಯಕ್ಕಾಗಿ ಮಣ್ಣು ತಿನ್ನುವ ಕೆಲಸ ಮಾಡಿದೆನಲ್ಲಾ! ಸ್ವಂತ ಅಣ್ಣನನ್ನೇ ಎತ್ತಿ ನೆಲಕ್ಕೊಗೆಯುವ ದುಸ್ಸಾಹಸಕ್ಕೆ ಇಳಿದುಬಿಟ್ಟೆನಲ್ಲಾ! ಮನುಷ್ಯತ್ವವನ್ನು ಮರೆತು ಮೃಗವಾಗಿಬಿಟ್ಟೆನಲ್ಲ! ಯೋಚಿಸಿ ಕುಗ್ಗಿದ ಬಾಹುಬಲಿ ಅಣ್ಣನನ್ನು ತಲೆಮೇಲಿಂದ ನಿಧಾನವಾಗಿ ಇಳಿಸಿ ನೆಲದ ಮೇಲೆ ನಿಲ್ಲಿಸಿದ. ಮದಗಜವೊಂದು ಮರವನ್ನು ಬುಡಸಮೇತ ಎತ್ತಿ ಸುತ್ತಿದರೆ ಹೇಗೋ ಹಾಗೆ ತಮ್ಮನಿಂದ ಊರ್ಧ್ವಮೂಲನಾಗಿ ಗಾಳಿಯಲ್ಲಿ ಕೈಕಾಲು ಬಡಿಯುತ್ತಿದ್ದ ಭರತನಿಗೆ, ನೆಲದಲ್ಲಿ ನಿಂತನೋ ಇಲ್ಲವೋ, ಮತ್ತೆ ಪೌರುಷ ಹೆಡೆಬಿಚ್ಚಿತು. ತನ್ನ ಚಕ್ರರತ್ನವನ್ನು ಅವನು ಬಾಹುಬಲಿಯ ಮೇಲೆ ಪ್ರಯೋಗಿಸಿದ. ಆದರೆ ಚಕ್ರ ಬಾಹುಬಲಿಯ ಕತ್ತು ಕತ್ತರಿಸುವ ಬದಲಿಗೆ ಆತನಿಗೊಂದು ಸುತ್ತು ಹಾಕಿ ಬಲಭಾಗದಲ್ಲಿ ನಿಂತು ನೆಲಕ್ಕೆ ಬಿದ್ದುಬಿಟ್ಟಿತು. ನೆರೆದು ನೋಡುತ್ತಿದ್ದ ಜನಸ್ತೋಮ ಹೋ ಎಂದು ಬೊಬ್ಬೆಹೊಡೆಯಿತು. ಭರತನಿಗೆ ಅವಮಾನವಾಯಿತು. ತಮ್ಮನ ಕೈಯಲ್ಲಿ, ಸಮಸ್ತ ಸಾಮ್ರಾಜ್ಯದ ಜನಸಾಗರದೆದುರಲ್ಲಿ ಪರಾಜಿತನಾಗಿ ಮಣ್ಣುಮುಕ್ಕಿದೆನಲ್ಲಾ ಎಂಬ ರೋಷದಿಂದ ಅವನು ಹಲ್ಲು ಮಸೆದ. ಮುಂದೆ ಬಾಹುಬಲಿ ತನ್ನ ರಾಜ್ಯವನ್ನು ಅಣ್ಣ ಭರತನಿಗೆ ಬಿಟ್ಟುಕೊಟ್ಟು ತಾಪಸಿಯಾದದ್ದು, ನಿಂತಲ್ಲೇ ಕಾಯೋತ್ಸರ್ಗ ಭಂಗಿಯಲ್ಲಿ ನಿಂತು ತಪಸ್ಸಾಚರಿಸಿ ಮೋಕ್ಷ ಪಡೆದದ್ದು, ಭರತ ಹಲವಾರು ವರ್ಷಗಳ ಕಾಲ ರಾಜ್ಯವನ್ನಾಳಿ, ಬಾಹುಬಲಿಯ ರಾಜ್ಯವಾಗಿದ್ದ ಪೌದನಪುರದಲ್ಲಿ 525 ಬಿಲ್ಲುಗಳೆತ್ತರದ ಬಂಗಾರದ ಪ್ರತಿಮೆಯೊಂದನ್ನು ಮಾಡಿಸಿ ಬಾಹುಬಲಿಗೆ ಗೌರವ ಸೂಚಿಸಿದ್ದು, ಮತ್ತು ಕೊನೆಗೆ ತಾನೂ ಮೋಕ್ಷಸಾಧನೆಗಾಗಿ ವಿರಾಗಿಯಾಗಿದ್ದು – ಇವಿಷ್ಟು ಜನಜನಿತವಾಗಿರುವ ಕತೆ.

ಸಿಹಿಪದಾರ್ಥಗಳನ್ನು ಜೀವನವೆಲ್ಲ ತಿಂದವನಿಗೆ ಸಕ್ಕರೆಯ ಮೇಲೆ ವಿರಕ್ತಿ ಹುಟ್ಟುವಂತೆ ಹಲವು ವರ್ಷಗಳ ಪರ್ಯಂತ ಅಧಿಕಾರ ಅನುಭವಿಸಿದವನಿಗೆ ಅದರ ಮೇಲಿನ ಮೋಹ ಇಳಿಯುವುದು ಸಹಜ ಎಂದು ನಾವು ಭಾವಿಸುವುದೇನೋ ಸಹಜವೇ. ಆದರೆ, ಹಾಗೆ ಹುದ್ದೆ-ಅಂತಸ್ತುಗಳನ್ನು ಅನುಭವಿಸಿದ್ದು ಸಾಕು ಎನ್ನಿಸಿ ಅಧಿಕಾರಪರಾಙ್ಮುಖನಾದ ಒಬ್ಬ ರಾಜಕಾರಣಿಯನ್ನೂ ನಾವು ಕಾಣುತ್ತಿಲ್ಲವಲ್ಲ ಎಂಬುದು ಮಾತ್ರ ಅಚ್ಚರಿಯ ಸಂಗತಿ! ಅಧಿಕಾರ ಅನುಭವಿಸಿದವರಿಗೆಲ್ಲ ಮತ್ತಷ್ಟು ಇನ್ನಷ್ಟು ಮಗದಷ್ಟು ಮೊಗೆದಷ್ಟೂ ಬೇಕು ಎನ್ನಿಸುವ ಈ ಕಾಲದಲ್ಲಿರುವ ನಮಗೆ ಬಾಹುಬಲಿಯ ತ್ಯಾಗ ಎಷ್ಟು ದೊಡ್ಡದು ಎಂಬ ಅಂದಾಜು ಬಹಳ ಬೇಗ ಆದೀತು. ಭರತ – ಬಾಹುಬಲಿಗಳ ಕತೆಯನ್ನು ಜೈನಪುರಾಣಗಳಲ್ಲಿ ಬಹಳ ಹಿಂದೆಯೇ ದಾಖಲಿಸಲಾಗಿದ್ದರೂ ನಮಗೆ ಸಿಗುವ ಅತಿ ಹಳೆಯ ದಾಖಲೆಗಳೆಂದರೆ ಕವಿಪರಮೇಷ್ಠಿಯ ಮಹಾಪುರಾಣ ಮತ್ತು ಜಿನಸೇನನ ಪೂರ್ವಪುರಾಣ ಎಂಬೆರಡು ಕಾವ್ಯಗಳು. ಇಲ್ಲಿ ಸಣ್ಣರೂಪದಲ್ಲಿ ಬಂದಿರುವ ಕತೆಯನ್ನೇ ಹಿಗ್ಗಿಸಿ ಬನವಾಸಿಯ ಪಂಪ ಆದಿಪುರಾಣವನ್ನು ಬರೆದ; ಮೂಡಬಿದ್ರೆಯ ರತ್ನಾಕರವರ್ಣಿ ಭರತೇಶ ವೈಭವ ರಚಿಸಿದ. ಇಬ್ಬರ ಕಾವ್ಯಧೋರಣೆಗಳು, ಆಶಯಗಳು ಸ್ವಲ್ಪ ಭಿನ್ನವೇ ಆಗಿವೆ. ಭರತನ ಸೊಕ್ಕು ಮುರಿದು, ಅಹಂಕಾರ ಕಳೆದು, ವಿವೇಕವನ್ನು ಮೂಡಿಸಿದ ಮಹಾಮೂರ್ತಿಯಾಗಿ ಬಾಹುಬಲಿ ಪಂಪನ ಕಾವ್ಯದಲ್ಲಿ ಬಂದರೆ ರತ್ನಾಕರವರ್ಣಿಗೆ ಹಾಗೆ ಭರತನನ್ನು ಕೃಷ್ಣಛಾಯೆಯಲ್ಲಿ ಬಿಂಬಿಸುವುದು ಅಷ್ಟೊಂದು ಇಷ್ಟವಾಗಲಿಲ್ಲವೇನೋ. ಹಾಗಾಗಿ ಆತ ಸೋದರರಿಬ್ಬರ ನಡುವೆ ಕಾಳಗವನ್ನೇ ಮಾಡಿಸದೆ, ಭರತನ ಮರ್ಯಾದೆ ರಕ್ಷಿಸಿದ್ದಾನೆ! ಭರತ ಸೋಲುವವನಲ್ಲ; ಸೋಲಲೂ ಇಲ್ಲ; ಆದರೆ ಅವನ ಅಂತಃಕರಣ ಸೋತಿತು ಎಂಬ ಭಿನ್ನ ಆಯಾಮ ತಂದು ರತ್ನಾಕರವರ್ಣಿ ಕಥೆಗೆ ಹೊಸರೂಪ ಕೊಡುತ್ತಾನೆ.

ಭರತ ಭೂಮಂಡಲದ ಎಲ್ಲ ಆರು ಖಂಡಗಳನ್ನೂ ಗೆದ್ದು ವಾಪಸು ಬರುತ್ತಿರುವಾಗ ವೃಷಭಾಚಲಕ್ಕೆ ಬಂದನಂತೆ. ಅವನ ಹಿಂದುಮುಂದಿನ ಗೊತ್ತಿರುವ ಚರಿತ್ರೆಯಲ್ಲೆಲ್ಲೂ ಷಟ್‌ಖಂಡ ದಿಗ್ವಿಜಯಗೈದವರು ಯಾರೂ ಇರಲಿಲ್ಲ. ಶತಕೋಟಿ ಕಲ್ಪಗಳಲ್ಲಿ ಹಿಂದೆ ಅಂಥ ಹಲವು ರಾಜರು ಬಂದುಹೋಗಿದ್ದರೂ ಅವರ್‍ಯಾರ ಹೆಸರುಗಳೂ ಭರತನ ಕಾಲದಲ್ಲಿ ಚಾಲ್ತಿಯಲ್ಲಿರಲಿಲ್ಲ. ಭರತ ಬಂದ, ವೃಷಭಾಚಲದ ಬೆಟ್ಟವನ್ನು ಕಂಡ. ಅಷ್ಟರಲ್ಲಿ ಅವನ ಮನಸ್ಸಿನಲ್ಲಿ ಒಂದು ಕನಸು ಮೂಡಿತು. ಆ ಬೆಟ್ಟದ ಮೇಲೆ ತನ್ನ ಹೆಸರನ್ನು ದೊಡ್ಡದಾಗಿ ಕೆತ್ತಿಸಬೇಕು ಎಂದು! ಷಟ್ ಖಂಡಗಳನ್ನು, ಅರ್ಥಾತ್ ಇಡೀ ಪ್ರಪಂಚವನ್ನೇ ಗೆದ್ದುಬಂದಿರುವ ತನ್ನ ಹೆಸರನ್ನು ಬೆಟ್ಟದ ಬಂಡೆಯಲ್ಲಲ್ಲದೆ ಮತ್ತೆಲ್ಲಿ ಕೆತ್ತಿಸಬೇಕು? ಕೂಡಲೇ ತನ್ನ ಪರಿವಾರದವರನ್ನು ಕರೆದ. ಆ ಬೆಟ್ಟಕ್ಕೆ ಹೋಗಿ ತನ್ನ ಹೆಸರು ಕೆತ್ತಿ ಎಂದ. ಅವರು ಅಲ್ಲಿಗೆ ಹೋಗಿ, ವಾಪಸು ಬಂದರು. ಬಂದು ಹೇಳಿದರು: ಸ್ವಾಮಿ, ಆ ಬೆಟ್ಟದ ತುಂಬ ಹಿಂದೆ ಷಟ್ಖಂಡ ಗೆದ್ದವರ ಹೆಸರುಗಳನ್ನು ಬರೆದು ಆ ಬೆಟ್ಟ ತುಂಬಿಹೋಗಿದೆ! ನಿಮ್ಮ ಹೆಸರು ಬರೆಯಲಿಕ್ಕೆ ಅಲ್ಲಿ ಸ್ಥಳ ಇಲ್ಲ! ಭರತನಿಗೆ ಕೋಪ ಉಕ್ಕೇರಿತು.

ಹಾಗೆಂದರೆ ಹೇಗೆ! ಈ ದಿಗ್ವಿಜಯ ಹೊಚ್ಚಹೊಸತು. ಬರೆಯಲಿಕ್ಕೆ ಸ್ಥಳ ಇಲ್ಲದಿದ್ದರೆ ಯಾರದ್ದಾದರೂ ಹೆಸರು ಅಳಿಸಿ ನನ್ನ ಹೆಸರು ಬರೆಯಿರಿ! ಆಗ ಜನ ಹೇಳಿದರು: ಹಾಗೆ ಮಾಡಿದರೆ ಅದು ಹೊಸ ದಾಖಲೆ ಆಗುತ್ತದೆ! ಅಂದರೆ ಹಿಂದಿನ ಸಾಧಕರ ಹೆಸರು ಅಳಿಸಿ ತಮ್ಮ ಹೆಸರು ಹಾಕುವ ಹೊಸಬಗೆಯ ದಾಖಲೆ ಆಗುತ್ತದೆ ಅದು! ಭರತನ ಆ ಕಾಲದ ಆ ಪ್ರಚಾರದ ತೆವಲನ್ನು ಈಗಿನ ನಮ್ಮ ರಾಜಕಾರಣಿಗಳಿಗೆ ಹೋಲಿಸಿ ನೋಡಿ. ಆ ಕಾವ್ಯಸಂದರ್ಭ ಈ ಕಾಲಕ್ಕೂ ಅದೆಷ್ಟು ಪ್ರಸ್ತುತ ಎಂಬುದು ಅರಿವಾದೀತು. ನಮ್ಮ ರಾಜಕಾರಣಿಗಳಿಗೆ, ದೇಶದಲ್ಲಿ ತಮ್ಮಿಂದ ಕಿಂಚಿತ್ತಾದರೂ ಸಾಧನೆ ಆಗುತ್ತದೋ ಬಿಡುತ್ತದೋ, ಹೆಸರು ಮಾತ್ರ ಅಮೃತಶಿಲೆಯಲ್ಲಿ ಕೆತ್ತಲ್ಪಡಬೇಕು. ತಮ್ಮ ಹೆಸರು, ಫೋಟೋ ಬ್ಯಾನರ್‌ಗಳಲ್ಲಿ ರಾರಾಜಿಸಬೇಕು. ಹೊಸ ಬ್ಯಾನರ್ ಕಟ್ಟಲು ಜಾಗ ಇಲ್ಲವಾದರೆ ಹಳೆಯದನ್ನು ಕಿತ್ತಾದರೂ, ಅನ್ಯಪಕ್ಷದವರದ್ದನ್ನು ಹರಿದಾದರೂ ಇವರದ್ದನ್ನು ಮೆರೆಸಬೇಕು. ಭರತ ಬಾಹುಬಲಿಯಿಂದ ಸೋತದ್ದಕ್ಕೆ, ಬಾಹುಬಲಿಯ ಮಹತ್ತಿನ ನೆಪದಲ್ಲಿ ಕತೆಯ ಮೂಲಕವಾದರೂ ನಮ್ಮ ನೆನಪಲ್ಲಿ ಉಳಿದಿದ್ದಾನೆ. ಸೋಲುವ ಪ್ರಸಂಗ ಬರದೇಹೋಗಿದ್ದರೆ ಅವನ ನೆನಪನ್ನು ಇಂದಿನ ಜಮಾನದವರು ಮಾಡುತ್ತಿದ್ದರೆ? ಭರತ ವೃಷಭಾಚಲದ ಬೆಟ್ಟದ ಬಂಡೆಯ ಮೇಲಿನ ಒಂದು ಪದಮಾತ್ರನಾಗಿ ಇತಿಹಾಸದಲ್ಲಿ ಉಳಿದುಹೋಗುತ್ತಿದ್ದನೋ ಏನೋ!

ಭರತನದ್ದು ಆಸೆಬುರುಕತನವಾದರೆ ಬಾಹುಬಲಿಯದ್ದು ವೈರಾಗ್ಯದ ಕತೆ. ಆತನಿಗೆ ವೈರಾಗ್ಯ ಹುಟ್ಟಿದ್ದು ಹೇಗೆ? ಯಾವ ಕ್ಷಣದಲ್ಲಿ? ತನ್ನ ಮೇಲೆ ತನಗೇ ಜಿಗುಪ್ಸೆ ಬಂದು ವೈರಾಗ್ಯ ಹುಟ್ಟಿತೆ? ಅಥವಾ ಅಣ್ಣನ ಭೂಮಿಯ ಮೇಲಿನ ಆಸೆಬುರುಕತನ ಕಂಡು ಹೇಸಿಗೆಯಾದಾಗ ಆ ಭಾವನೆಯ ಬೈಪ್ರಾಡಕ್ಟ್ ಆಗಿ ವೈರಾಗ್ಯ ಬಂತೆ? ಪಂಪ, ಬಾಹುಬಲಿಯ ಮನಸ್ಸಿನೊಳಗಾಗುತ್ತಿದ್ದ ಎಲ್ಲ ತಾಕಲಾಟಗಳಿಗೆ ಸರ್ಚ್‌ಲೈಟ್ ಹಿಡಿಯುವ ಕೆಲಸವನ್ನು ಕಾವ್ಯದಲ್ಲಿ ಮಾಡಿದ್ದಾನೆ.

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯವಿಮೋಹಮಚಿರರುಚಿ ಸಂಚಳಮಿಂ
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುಳಿದವರಳವೇ

ಎಂಬ ಮಾತುಗಳನ್ನು ಬಾಹುಬಲಿಯ ನಾಲಗೆಯಿಂದ ನುಡಿಸಿದ್ದಾನೆ ನಾಡೋಜ ಪಂಪ. ಭರತನಿಗೆ ತಲೆಬಾಗಲು ಕೇಳದೆ ಯುದ್ಧಕ್ಕಿಳಿಯುವ ಬಾಹುಬಲಿ, ಯುದ್ಧದಲ್ಲಿ ಗೆದ್ದರೂ, ರಾಜ್ಯಕ್ಕಾಗಿ ಅಣ್ಣ ಮಾಡಲೆಳಸಿದ ಅಕಾರ್ಯವನ್ನು ನೋಡಿ ವೈರಾಗ್ಯ ತಾಳುತ್ತಾನಂತೆ. ಭೂಮಿ-ರಾಜ್ಯಗಳಿಗಾಗಿ ಅಣ್ಣತಮ್ಮಂದಿರೇ ಕಿತ್ತಾಡಿಕೊಂಡೆವಲ್ಲ! ತೀರ್ಥಂಕರನ ಮಗ ಭರತ; ಅವನ ಮನಸ್ಸಿನೊಳಗೂ ತಮ್ಮನನ್ನು ಚಕ್ರದಿಂದ ತುಂಡರಿಸಬೇಕು ಎಂಬ ಭಾವನೆಯನ್ನು ಮೂಡಿಸಿಬಿಟ್ಟಿತಲ್ಲ ಈ ಮಣ್ಣಿನಾಸೆ! ಎಂಬ ಭಾವನೆ ಮನಸ್ಸಿನಲ್ಲಿ ಮೂಡುತ್ತಲೇ ಬಾಹುಬಲಿ ವಿರಾಗಿಯಾಗಿಬಿಟ್ಟ. ಅಂದರೆ ಅವನಲ್ಲಿ ಮನಃಪರಿವರ್ತನೆಯಾಗಲು ಭರತನ ಹುಂಬತನವೇ ಮುಖ್ಯ ಕಾರಣ ಎಂದಾಯಿತು. ಒಂದು ಗಳಿಗೆಯ ಹಿಂದೆ ತನ್ನ ತಮ್ಮನ ಕೈಯಲ್ಲಿ ಅಸಹಾಯಕನಾಗಿ ಗಾಳಿಯಲ್ಲಿ ನಿಂತಿದ್ದ ಭರತ, ನೆಲಕ್ಕೆ ಕಾಲು ಕೊಡುವುದೇ ತಡ, ದೃಢವಾಗಿ ನಿಂತು ಚಕ್ರರತ್ನ ಎಸೆದು ತಮ್ಮನ ಜೀವ ತೆಗೆಯಲು ನೋಡಿದ! ಮನುಷ್ಯ ಅಧಿಕಾರಕ್ಕಾಗಿ ಅದೆಂಥ ಅತಿಗೂ ಹೋಗಬಲ್ಲನೆಂಬ ತಥ್ಯ ಬಾಹುಬಲಿಗೆ ಆ ಕ್ಷಣದಲ್ಲಿ ಹೊಳೆಯಿತು; ಜ್ಞಾನೋದಯವಾಯಿತು. ರಾಜ್ಯಶ್ರೀಯ ವ್ಯಾಮೋಹ ಬಲು ಅಪಾಯಕರ. ಅದು ಸೋದರರನ್ನು ಕಾದಿಸುತ್ತದೆ; ಅಪ್ಪ-ಮಕ್ಕಳ ಮಧ್ಯೆ ಬಿರುಕು ಹುಟ್ಟಿಸುತ್ತದೆ; ಸಂಬಂಧಿಗಳ ಮಧ್ಯೆ ಕೋಪವನ್ನು ಉತ್ಪಾದಿಸುತ್ತದೆ. ಇಂಥ ಹೆಣ್ಣಿನ ಸಹವಾಸ ತನಗೆ ಬೇಕೇ? ಬೇಡವೇ ಬೇಡ ಎಂದು ನಿಶ್ಚಯಿಸಿ ಬಾಹುಬಲಿ ತನ್ನ ರಾಜ್ಯವನ್ನು ಭರತನ ಉಡಿಗೆ ಹಾಕಿದ. ಸುಮ್ಮನೇ ಹಾಕುವುದಿಲ್ಲ. ಹೇಳುತ್ತಾನೆ: ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ ಈ ಭಟಖಡ್ಗಮಂಡಲೋತ್ಪಲವನವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ.. ಅಂದರೆ, ಎಲಾ, ಎಷ್ಟು ಜನ ರಾಜರ ಖಡ್ಗದ ತುದಿಯ ಮೇಲೆ ಕುಣಿದು ಕುಣಿದು ನಿನ್ನ ಸರತಿ ಬಂತಲ್ಲಾ! ನೀನೂ ಉರುಳಿದ ಮೇಲೆ ಇನ್ನೊಬ್ಬರ ಕಡೆಗೆ ಹೋಗುತ್ತಾಳಾಕೆ! ಅಂಥ ಚಂಚಲೆಯ ಸಖ್ಯ ನನಗೆ ಬೇಕಾಗಿಲ್ಲ, ನಿನಗಿರಲಣ್ಣ! – ಎಂದು ಅರ್ಥ. ಅಬ್ಬ, ಅದೆಂಥ ಹೃದಯಭೇದಕ ಸತ್ಯವನ್ನು ಅಷ್ಟು ನಿರ್ವಿಣ್ಣತೆಯಿಂದ ಹೇಳುತ್ತಾನೆ ಬಾಹುಬಲಿ! ಅಷ್ಟೇ ಏನು? ಮುಂದುವರಿದು ಹೇಳುತ್ತಾನೆ: ಭೂವಲಯಮನ್ – ಅಯ್ಯನಿತ್ತುದುಮನ್ – ಆಂ ನಿನಗಿತ್ತೆನ್ ಇದೇವುದಣ್ಣ! ನೀನೊಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಳ್ತೆ ಮಾಸದೇ! ಅಂದರೆ: ಒಂದೇ ಹೆಣ್ಣಿನ ಮೇಲೆ ದೊಡ್ಡ ಮನೆತನದ ಇಬ್ಬರು – ಅಣ್ಣತಮ್ಮಂದಿರು ಕಣ್ಣಿಟ್ಟರು ಎಂದರೆ ಅವರನ್ನು ಮನುಷ್ಯರು ಎಂದು ಕರೆಯಬಹುದೆ? ಗೊತ್ತಿರಲಿಲ್ಲ ಕಣಯ್ಯ ನೀನು ಭೂಮಿಗೆ ಇಷ್ಟು ಅಂಟಿಕೊಂಡಿದ್ದೀ ಎಂದು! ಹೋಗು, ಎಲ್ಲವನ್ನೂ ನೀನೇ ತೆಗೆದುಕೋ, ಅನುಭವಿಸು!

ಹೀಗೆ ಪಂಪ, ಬಾಹುಬಲಿಗೆ ವೈರಾಗ್ಯ ಹುಟ್ಟಿದ ಮೇಲೂ ಅವನಿಂದ ಕತ್ತಿಯೇಟಿನಂಥ ಮಾತುಗಳನ್ನು ಆಡಿಸಿ ಭರತನ ಮನಃಪರಿವರ್ತನೆ ಮಾಡಿಸಲು ಯತ್ನಿಸುತ್ತಾನೆ. ಆದರೆ ಭರತ ನೆಲಕ್ಕಂಟಿನಿಂತ ಜೀವ. ಅವನಿಗೆ ಇನ್ನೂ ವೈರಾಗ್ಯದ ಭಾವ ಮನಸ್ಸಿನಲ್ಲಿ ಇಣುಕಿಲ್ಲ, ಹಾಗಾಗಲು ಕಾಲ ಕೂಡಿಬರಬೇಕಲ್ಲ! ಇದೇ ನನ್ನ ಕೊನೆಯ ಚುನಾವಣೆ ಎಂದು ಪ್ರತಿ ಎಲೆಕ್ಷನ್ನಲ್ಲೂ ಘೋಷಿಸಿಕೊಂಡು ಗೆದ್ದುಬರುವ ರಾಜಕಾರಣಿಗಳನ್ನು ಕಂಡರೆ ಭರತನ ಅಂದಿನ ಮನಸ್ಥಿತಿಯನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದೋ ಏನೋ.

ಯೋಚಿಸುತ್ತ ಹೋದರೆ ಬಾಹುಬಲಿ ತಾನಿರುವ ಐವತ್ತೇಳು ಅಡಿಗಳಿಗಿಂತಲೂ ಎತ್ತರಕ್ಕೆ ಬೆಳೆಯುತ್ತ ಹೋಗುತ್ತಾನೆ. ತನ್ನಣ್ಣನೇ ಮೇಲೇರಿ ಬಂದಾಗ, ರಾಜ್ಯವನ್ನು ಉಳಿಸಿಕೊಳ್ಳಲೋಸುಗ ಕಾದುವುದೇ ತನ್ನ ಕ್ಷತ್ರಿಯ ಧರ್ಮ ಎಂದು ಕಾದುವ ಬಾಹುಬಲಿ; ಅಣ್ಣನನ್ನು ಮೂರು ಯುದ್ಧಗಳಲ್ಲಿ ಸೋಲಿಸಿಯೂ ಕೊಲ್ಲದೆ ಉಳಿಸಿ ಭಾತೃಧರ್ಮವನ್ನು ಮೆರೆಯುವ ಬಾಹುಬಲಿ; ಅಣ್ಣನ ಧನ ಮತ್ತು ಭೂಮಿಯ ಆಕಾಂಕ್ಷೆಗೆ ಅಡ್ಡಬರದೆ ಅನುಭವಿಸಬೇಕಾದ್ದೆಲ್ಲ ಅನುಭವಿಸುತ್ತ ಇದ್ದುಬಿಡು ಎಂದು ಹೇಳಿ ತನ್ನ ಪಾಡಿಗೆ ತಾನು ವಿರಾಗಮೂರ್ತಿಯಾಗಿ ಹೊರಟುಬಿಡುವ ಮಹಾಮಾನವ ಬಾಹುಬಲಿ... ಅವನ ವ್ಯಕ್ತಿತ್ವದ ಔನ್ನತ್ಯಕ್ಕೆ ಅವನೇ ಸಾಟಿ. ಗೆದ್ದರೆ ಗೆಲ್ಲಬೇಕು ಬಿಟ್ಟುಕೊಡುವುದರಿಂದ ಎಂಬ ಕೆ.ವಿ. ತಿರುಮಲೇಶರ ಕವಿತೆಯ ಸಾಲಿನಂತೆ ಆತ ಸಾವಿರ ಸಾವಿರ ವರ್ಷಗಳ ನಂತರವೂ ನಮ್ಮ ನೆನಪಲ್ಲಿ ಉಳಿದಿರುವುದು, ಆಕಾಶದೆತ್ತರ ಮೈಚಾಚಿ ಶಾಶ್ವತನಾಗಿ ನಿಂತಿರುವುದು ಆತ ತನ್ನದೆಲ್ಲವನ್ನೂ ಬಿಟ್ಟುಕೊಟ್ಟ ಎಂಬ ಕಾರಣಕ್ಕೆ. ರಾಜ್ಯದಲ್ಲಿ ಚುನಾವಣೆಯ ಕಾವು ಏರುತ್ತಿದೆ. ಎಲ್ಲೆಲ್ಲೂ ಭರತರು ಹುಟ್ಟಿ ಸುಳ್ಳುಗಳ, ಆಶ್ವಾಸನೆಗಳ, ಕೆಸರೆರಚಾಟಗಳ, ಪರಸ್ಪರ ದೂಷಣೆಗಳ ಭರತವಾದಂತಿದೆ. ಕೇವಲ ಐದು ವರ್ಷಗಳ ಅವಧಿಗೆ ಅಧಿಕಾರದಂಡ ಹಿಡಿಯಲು ರಾಜಕಾರಣಿಗಳು ತಮ್ಮ ಎಲ್ಲವನ್ನೂ ಪಣಕ್ಕಿಟ್ಟು ಹೋರಾಡುತ್ತಿದ್ದಾರೆ. ಜಗದ ಈ ದೊಂಬರಾಟಗಳನ್ನೆಲ್ಲ ನೋಡುತ್ತ ಬೆಟ್ಟದ ಮೇಲೆ ನಿಂತಿರುವ ನಿರ್ವಿಕಾರಮೂರ್ತಿ ತುಟಿಯಂಚಿನಲ್ಲಿ ನಗುತ್ತಿದ್ದಾನೋ ಏನೋ.

ಈ ದೇಶದ ಭವಿಷ್ಯ ನಿರ್ಧರಿಸುವವರು ಯಾರು?

ಪಿ. ರಾಜೀವ್
ಲೇಖಕರು, ಶಾಸಕರು (ಕುಡಚಿ ಕ್ಷೇತ್ರ)

ಸಾರ್ವಜನಿಕನೊಬ್ಬ ಸಮಸ್ಯೆಗಳಿಗೆ ಸಿಲುಕಿಕೊಂಡಾಗ ತಕ್ಷಣ ದೂರುವುದು ಸರಕಾರವನ್ನು ಹಾಗೂ ಜನಪ್ರತಿನಿಧಿಯನ್ನು. ಪ್ರಕೃತಿ ವಿಕೋಪದಿಂದಾಗಿ ಧಾರಕಾರ ಮಳೆ ಸುರಿದಾಗ, ಕೆರೆ, ಕಾಲುವೆ, ಚರಂಡಿಗಳು ತುಂಬಿ ಸಾರ್ವಜನಿಕ ರಸ್ತೆ ಬೀದಿಗಳಿಗೆ ನುಗ್ಗಿದಾಗ ತಕ್ಷಣ ಜನಪ್ರತಿನಿಧಿಯನ್ನು ಶಪಿಸುತ್ತಾನೆ. ಅಪಘಾತಗಳು ಸಂಭವಿಸಿದಾಗ ರಸ್ತೆಗಳಲ್ಲಿ ವೇಗ ನಿಯಂತ್ರಣ ಹಂಪ್ ನಿರ್ಮಿಸದಿರುವ ಬಗ್ಗೆ ಜನಪ್ರತಿನಿಧಿ ಬೈಸಿಕೊಳ್ಳುತ್ತಾನೆ. ಬೀದಿ ನಾಯಿಗಳು ಅಮಾಯಕರನ್ನು ಅಟ್ಟಾಡಿಸಿ ಕಚ್ಚಿದಾಗ, ಅನುಭವಿಸುವ ಉರಿ ಶಮನವಾಗುವುದು ಸರಕಾರ ಹಾಗೂ ಜನಪ್ರತಿನಿಧಿಗಳನ್ನು ವಾಚಾಮಗೋಚರವಾಗಿ ಮಂಗಳಾರತಿ ಎತ್ತಿದಾಗಲೇ. ಇಂತಹ ಯಾವುದೇ ಸಮಸ್ಯೆಗಳಿರಲಿ, ಬರ ಪರಸ್ಥಿತಿ ಎದುರಾಗಲಿ, ಭೂಕಂಪಗಳಾಗಲಿ, ಸರಕಾರಿ ಕಚೇರಿಗಳಲ್ಲಿ ಲಂಚದ ನಗ್ನನರ್ತನವಾಗಲಿ ಮುಂತಾದ ಸಂದರ್ಭಗಳಲ್ಲಿ ಎಲ್ಲರೂ ಗುರಿಯಾಗಿಸುವುದು ಜನಪ್ರತಿನಿಧಿಯನ್ನು. ಆಕಸ್ಮಿಕ ವಿದ್ಯುತ್ ಆಘಾತದಿಂದ ಮನೆ ಸುಟ್ಟು ಹೋದಾಗ, ಸಾಲಭಾದೆ ತಾಳಲಾರದೆ ರೈತ ಆತ್ಮಹತ್ಯೆ ಕೈಗೊಂಡಾಗ, ಬೆಳೆದ ಫಸಲುಗಳು ಕೀಟಬಾಧೆಗೆ ಆಹುತಿಯಾದಾಗ, ಗುಣಮಟ್ಟದ ಇಳುವರಿ ಬಂದು ಮಾರುಕಟ್ಟೆಯಲ್ಲಿ ದರ ಕುಸಿತಗೊಂಡಾಗಿನಿಂದ ಹಿಡಿದು ಕುಟುಂಬದ ಸದಸ್ಯರು ತೀರಿ ಹೋದಾಗ, ಸೂತಕದ ಮನೆಗೆ ಭೇಟಿ ನೀಡಲು ವಿಫಲವಾದಾಗ, ಮದುವೆ, ನಾಮಕರಣ, ವಾಸ್ತುಶಾಂತಿ ಮುಂತಾದ ಮನೆ ಕಾರ್ಯಕ್ರಮಗಳಿಗೆ ಹಾಜರಾಗುವಲ್ಲಿ ತಪ್ಪಿದಾಗ ಕೆಂಗಣ್ಣಿಗೆ ಗುರಿಯಾಗುವುದು ಜನಪ್ರತಿನಿಧಿಗಳು. ಇಷ್ಟೆಲ್ಲ ಆಲೋಚಿಸುವ ಜನರು ಜನಪ್ರತಿನಿಧಿಯ ಆಯ್ಕೆಯ ವಿಷಯದಲ್ಲಿ ಎಡವುವುದಾದರೂ ಎಲ್ಲಿ?

ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲಾ ಪಕ್ಷಗಳು ತಮ್ಮ ತಮ್ಮ ಚಟುವಟಿಕೆಗಳನ್ನು ಗರಿಗೆದರಿಸಿಕೊಂಡಿವೆ. ಕರ್ನಾಟಕದಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಪ್ರಾರಂಭವಾದ ಪರಿವರ್ತನಾ ರ್‍ಯಾಲಿ ಉಳಿದ ರಾಜಕೀಯ ಪಕ್ಷಗಳನ್ನು ಚುಚ್ಚಿ ಎಬ್ಬಿಸಿದಂತಾಗಿದೆ. ಕಾಂಗ್ರೆಸ್ ಪಕ್ಷವು ಸಾಧನಾ ಸಮಾವೇಶವನ್ನು ಕೈಗೊಳ್ಳುವುದರ ಮೂಲಕ ಮುಖ್ಯಮಂತ್ರಿಯವರು ಇಡೀ ರಾಜ್ಯವನ್ನು ಸುತ್ತಾಡಿದರು. ಸಾರ್ವಜನಿಕರ ತೆರಿಗೆಯ ಹಣದಿಂದ ಹೆಲಿಕಾಪ್ಟರ್ ಮೂಲಕ ಸಾಧನಾ ಸಮಾವೇಶ ಹಾಗೂ ಸರಕಾರಿ ಕಾರ್ಯಕ್ರಮಗಳ ಶಂಕು ಸ್ಥಾಪನೆಗಳು ಎಂಬ ಶೀರ್ಷಿಕೆಯನ್ನಿಟ್ಟುಕೊಂಡಿದ್ದರೂ ಸಹ ಉದ್ದೇಶ ಮಾತ್ರ ರಾಜಕೀಯ ಪ್ರೇರಿತವೇ ಆಗಿತ್ತು! ಹೀಗೆ ರಾಜ್ಯಾದ್ಯಂತ ಕೈಗೊಳ್ಳಲಾದ ಪ್ರವಾಸದಲ್ಲಿ ಹಮ್ಮಿಕೊಂಡಿದ್ದ ಶಂಕು ಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮಗಳಿಗೆ ಸಣ್ಣದೊಂದು ವೇದಿಕೆಯನ್ನು ಸಿದ್ಧಪಡಿಸಿ ಕಾಟಾಚಾರಕ್ಕೆಂಬಂತೆ ಕಾರ್ಯಕ್ರಮಗಳನ್ನು ನೇರವೇರಿಸಿ, ಅದೇ ಕ್ಷೇತ್ರದಲ್ಲಿ ಅಣತಿದೂರದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ರಾಜಕೀಯ ಕಾರ್ಯಕ್ರಮದಲ್ಲಿ ರಾಜಕೀಯ ಆರೋಪ ಪ್ರತ್ಯಾರೋಪಗಳು, ಟೀಕೆ ಟಿಪ್ಪಣಿಗಳು ಉದುರಿ ಬಿದ್ದವು. ಜೆಡಿಎಸ್ ಪಕ್ಷದವರೂ ಸಹ ಕುಮಾರ ಪರ್ವವೆಂಬ ಅಧ್ಯಾಯವನ್ನೆ ತೆರೆದಿಡಲು ಸಿದ್ಧರಾದರು. ಮೊನ್ನೆ ಬೆಂಗಳೂರಿನಲ್ಲಿ ನಡೆದ ಬಿಜೆಪಿ ಪಕ್ಷದ ಪರಿವರ್ತನಾ ರ್‍ಯಾಲಿಯ ಸಮಾರೋಪ ಸಮಾರಂಭಕ್ಕೆ ಆಗಮಿಸಲಿದ್ದ ನರೇಂದ್ರ ಮೋದಿಯವರ ಕಾರ್ಯಕ್ರಮದ ದಿನದಂದು ಮಹದಾಯಿ ಸಮಸ್ಯೆಯ ಇತ್ಯರ್ಥಕ್ಕೆ ಒತ್ತಾಯಿಸಿ ರಾಜ್ಯಾದ್ಯಂತ ಬಂದ್ ಕೈಗೊಳ್ಳಲು ತೀರ್ಮಾನಿಸಲಾಯಿತು.

ಸರಕಾರವೆಂಬುದು ಅಭಿವೃದ್ಧಿಯ ಸಾಧನೆಗೆ ಚಲಿಸುವ ಯಂತ್ರದಂತಿರಬೇಕೆಂಬುದು ಚಿಂತಕರ ಆಲೋಚನೆಯಾಗಿದೆ. ರಾಜಕೀಯ ಕಾರಣಗಳಿಗಾಗಿ ಕೆಲವೊಂದು ಸಂದರ್ಭಗಳಲ್ಲಿ ಸರಕಾರಗಳು ಕೆಲವು ಸಂಘಟನೆಗಳು ಹಮ್ಮಿಕೊಳ್ಳುವ ಬಂದ್ ಕಾರ್ಯಕ್ರಮಗಳಿಗೆ ಪರೋಕ್ಷವಾಗಿ ಸಹಕಾರ ನೀಡಿದ್ದನ್ನು ಸ್ಮರಿಸಬಹುದು. ಆದರೆ ಕೇವಲ ರಾಜಕೀಯ ಉದ್ದೇಶಕ್ಕಾಗಿ ಸರಕಾರವೇ ಮುಂದೆ ನಿಂತು ಮುಷ್ಕರ ಆಯೋಜಿಸುವಂತೆ ಪ್ರೇರಣೆ ನೀಡಿದ ಉದಾಹರಣೆ ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ! ಅಷ್ಟರ ಮಟ್ಟಿಗೆ ಹೊಸದೊಂದು ಪೂರಕವಲ್ಲದ ಪ್ರಕ್ರಿಯೆಗೆ ಭಾಗಿದಾರನಾದ ಹೊಣೆಯನ್ನು ಅಸ್ತಿತ್ವದಲ್ಲಿರುವ ಸರಕಾರ ಹೊತ್ತುಕೊಂಡಂತಾಗಿದೆ. ಈ ಕಾರಣಕ್ಕಾಗಿ ನ್ಯಾಯಾಲಯ ಮಧ್ಯೆ ಪ್ರವೇಶಿಸಿ ಮುಷ್ಕರಕ್ಕೆ ಅನುಮತಿ ನೀಡಲಾರದಂತೆ ಎಚ್ಚರಿಸಿದ್ದು, ಅಷ್ಟರ ಮಟ್ಟಿಗೆ ಸರಕಾರಗಳೆಂಬ ಸಂಸ್ಥೆಗಳು ವೈಯಕ್ತಿಕ ಹಿತಾಸಕ್ತಿಗೆ ಬಳಕೆಯಾಗಬಾರದೆಂಬ ಸಂದೇಶವನ್ನು ರವಾನಿಸಿದಂತಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರ ಭಾಷಣದ ಅಂಶಗಳಲ್ಲಿ ಸರಕಾರದ ಮೇಲೆ ಗಂಭೀರ ಆರೋಪವನ್ನು ಹೊರಿಸಲಾಯಿತು. ತದನಂತರದಲ್ಲಿ ಪರ ವಿರೋಧ ಅಭಿಪ್ರಾಯಗಳು ದೇಶದ ತುಂಬೆಲ್ಲ ವ್ಯಕ್ತವಾದವು. ಒಂದು ಸಮಾವೇಶಕ್ಕೆ ಪರ್ಯಾಯವೆಂಬಂತೆ ಮತ್ತೊಂದು ಸಮಾವೇಶಗಳು ಮೈತೆರೆದುಕೊಳ್ಳುತ್ತಲಿವೆ. ಹಾಗಿದ್ದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರನ್ನು ಓಲೈಸಲು ಇಂತಹ ಸಮಾವೇಶಗಳು ರೂಪುಗೊಳ್ಳುತ್ತವೆಯೆ? ಹೀಗೆ ಆಯೋಜನೆಗೊಳ್ಳುವ ರಾಜಕೀಯ ಬೃಹತ್ ಕಾರ್ಯಕ್ರಮಗಳ ಮೂಲ ಉದ್ದೇಶ ಜನರ ಮನೋಭಾವನೆಯನ್ನು ಜಾಗೃತಗೊಳಿಸುವುದಾಗಿರುತ್ತದೆಯೊ ಅಥವಾ ಅವರನ್ನು ಉದ್ರೇಕಗೊಳಿಸಿ ಚುನಾವಣೆಯ ಪ್ರಹಸನವನ್ನು ಈಡೇರಿಸಿಕೊಳ್ಳುವುದಾಗಿರುತ್ತದೆಯೊ? ಎಂಬ ಜಿಜ್ಞಾಸೆ ಬಹಳಷ್ಟು ಜನರಲ್ಲಿ ಮೂಡುವುದಂತೂ ಸತ್ಯ.

ಚುನಾವಣೆಗಳೆಂದರೆ ಕೇವಲ ಆಲೋಚನೆಯನ್ನವಲಂಬಿಸಿರುವುದಿಲ್ಲ, ಮಾನಸಿಕ ಉನ್ಮಾದದ ಪರಾಕಾಷ್ಠೆಯೂ ಮೇಳೈಸಿರುತ್ತದೆ. ಹಿಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಬಹಳಷ್ಟು ಐ.ಎ.ಎಸ್ ಅಧಿಕಾರಿಗಳು ಸೋತು ಇಂದಿಗೆ ಮೂಲೆಗುಂಪಾಗಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸಿದ ಹೃದಯವಂತರನ್ನು ಮಾತ್ರ ಜನರು ಒಪ್ಪಿಕೊಳ್ಳುತ್ತಾರೆ ಎನ್ನಲಾಗುವುದಿಲ್ಲ. ಅದು ನಿಜವಾಗಿದ್ದಲ್ಲಿ ಬಹಳಷ್ಟು ಜನ ಸನ್ಯಾಸಿಗಳು ವಿಧಾನಸೌಧದಲ್ಲಿ ತುಂಬಿ ತುಳುಕಾಡಬೇಕಾಗಿತ್ತು. ಬುದ್ಧಿವಂತ ಮತದಾರರನ್ನು ಹೊಂದಿದ್ದಾರೆಂದು ಪರಿಗಣಿಸಲ್ಪಟ್ಟ ಕರಾವಳಿಯಲ್ಲಿ ಸ್ಪರ್ಧಿಸಿದ್ದ ಶಿವರಾಮ ಕಾರಂತರು ಹೀನಾಯವಾಗಿ ಸೋಲನ್ನನುಭವಿಸಿದ್ದರು. ಹಾಗಿದ್ದರೆ ಚುನಾವಣೆಯಲ್ಲಿ ಪ್ರಮುಖವಾಗುವ ಅಂಶಗಳಾವವು? ಜನಸಾಮಾನ್ಯರು ಕೇವಲ ಅಭಿವೃದ್ಧಿಯನ್ನು ಬಯಸುತ್ತಾರೆಯೆ? ಅಥವಾ ತಮ್ಮ ನಾಯಕನ ಬುದ್ಧಿವಂತಿಕೆಯನ್ನು ಶ್ಲಾಘಿಸುತ್ತಾರೆಯೆ? ಅಥವಾ ವೈಯಕ್ತಿಕ ಸಹಾಯಗಳನ್ನು ಮಾತ್ರ ಮೆಚ್ಚುತ್ತಾರೆಯೆ? ಚುನಾವಣೆ ಗೆಲ್ಲಲು ಇಂತಹುದೆ ಮಾರ್ಗ ನಿಯಮಗಳಿವೆಯೆ?

ಸಧ್ಯಕ್ಕೆ ಕರ್ನಾಟಕದಲ್ಲಿ ರಾಹುಲ್ ಗಾಂಧಿಯವರ ಪ್ರವಾಸ ಚಾಲ್ತಿಯಲ್ಲಿದೆ. ಇದು ಮುಗಿಯುತ್ತಿದ್ದಂತೆ ಕರಾವಳಿ ಭಾಗದಲ್ಲಿ ಅಮಿತ್ ಶಾ ರವರು ಪ್ರವಾಸ ಕೈಗೊಳ್ಳಲಿದ್ದಾರೆಂದು ವರದಿಯಾಗಿದೆ. ಕೆಲ ರಾಜಕಾರಣಿಗಳು ಹಾಗೂ ಕೆಲ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ರೈತರು ಮತ್ತು ಬಡವರ ಕುರಿತು ಮಾತನಾಡಲಾರಂಭಿಸುತ್ತವೆ. ಆದರೆ ಕೆಲವೊಂದು ರಾಜಕೀಯ ಪಕ್ಷಗಳಿಗೆ ಇಂತಹ ಸಮಸ್ಯೆಗಳನ್ನು ಜೀವಂತವಾಗಿರಿಕೊಳ್ಳುವುದೆ ರಾಜಕೀಯ ಉದ್ದೇಶವೆಂಬಂತೆ ಗೋಚರಿಸುತ್ತದೆ. ಪ್ರಧಾನಮಂತ್ರಿಯವರು ಮಹದಾಯಿ ವಿಷಯದಲ್ಲಿ ಯಾವುದೇ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ ಎಂದು ಟೀಕಿಸುವ ಕಾಂಗ್ರೆಸ್ಸಿಗರು ಈ ಹಿಂದೆ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸಂದರ್ಭದಲ್ಲಿ ಶ್ರೀಮತಿ ಸೋನಿಯಾ ಗಾಂಧಿಯವರು ಗೋವಾ ರಾಜ್ಯದ ಚುನಾವಣಾ ಪ್ರಚಾರದಲ್ಲಿ ಕರ್ನಾಟಕಕ್ಕೆ ಮಹದಾಯಿ ನದಿಯ ಒಂದು ಹನಿ ನೀರನ್ನೂ ಬಿಟ್ಟು ಕೊಡುವುದಿಲ್ಲ ಎಂಬ ಹೇಳಿಕೆ ನೀಡಿದ್ದರು. ಕರ್ನಾಟಕದ ಕಾಂಗ್ರೆಸ್ಸಿಗರು ಇಂತಹ ಹೇಳಿಕೆಗೆ ಪ್ರತಿಕ್ರಯಿಸಲಾರದಷ್ಟೂ ನಿರುತ್ತರಿಗಳಾಗಿದ್ದಾರೆ. ಮಾತು ಮಾತಿಗೆ ಜೈಲಿಗೆ ಹೋಗಿ ಬಂದವರಿಂದ ಬುದ್ಧಿ ಹೇಳಿಸಿಕೊಳ್ಳುವ ಅಗತ್ಯವಿಲ್ಲವೆಂದು ಅಬ್ಬರಿಸುವ ಸಿದ್ದರಾಮಯ್ಯನವರು ಯಾವ ಪ್ರಕರಣದಲ್ಲಿ ಯಾರನ್ನು ಬಂಧಿಸಲಾಗಿತ್ತೊ ಅಂತಹ ಪ್ರಕರಣದ ವಿಚಾರಣೆ ಕೈಗೊಂಡ ನ್ಯಾಯಾಲಯವು ನಿರ್ದೋಷಿಗಳೆಂದು ತೀರ್ಪು ನೀಡಿರುವಾಗ ಇಂತಹ ಹೇಳಿಕೆಯನ್ನು ನೀಡಬಹುದೆ? ಅಮಾಯಕರು ಬಂಧನಕ್ಕೊಳಪಡುವಂತಾಗಲು ತನಿಖಾ ವ್ಯವಸ್ಥೆಯಲ್ಲಿನ ಲೋಪದೋಷಗಳು ಕಾರಣವಲ್ಲವೇ? ಇಂತಹ ಲೋಪದೋಷಗಳು ಮತ್ತೊಬ್ಬ ಅಮಾಯಕನನ್ನು ಬಲಿ ತೆಗೆದುಕೊಳ್ಳಲಾರದಂತೆ ಆಡಳಿತ ಪದ್ಧತಿಯ ಬದಲಾವಣೆಗಾಗಿ ಅಗತ್ಯ ಸುಧಾರಣೆ ಮತ್ತು ತಿದ್ದುಪಡಿಗಳ ಬಗ್ಗೆ ಚಕಾರವೆತ್ತದಿರುವುದು ಹೊತ್ತಿಕೊಂಡಿರುವ ಬೆಂಕಿ ತನ್ನ ಮನೆಯನ್ನು ಸುಡಲಿಲ್ಲವೆಂಬ ಅಹಂಭಾವ ತೃಪ್ತಿಯೆ?

ಯಾವುದೆ ರೀತಿಯ ನೋವುಗಳಿಗೆ, ಆಕಂದ್ರನಗಳಿಗೆ, ಶೋಷಣೆಗಳಿಗೆ, ಅಸಹನೆಗಳಿಗೆ ವ್ಯಕ್ತವಾಗದ ಜಾತಿಯ ಲೇಪನವು ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕೀಯ ವಲಯದಲ್ಲಿ ಅಮಲೇರಿದಂತೆ ಕುಣಿಯಲಾರಂಭಿಸುತ್ತದೆ. ಆದರೆ ಯಾವ ಜಾತಿವಾದವೂ ನಿರ್ದಿಷ್ಟ ಕೋಮಿನ ಕಟ್ಟಕಡೆಯ ವ್ಯಕ್ತಿಗೆ ಬದುಕನ್ನು ರೂಪಿಸಿದ ಉದಾಹರಣೆಗಳಿಲ್ಲ. ವಿದ್ಯಾವಂತರನ್ನು ಪ್ರಜ್ಞಾವಂತ ಮತದಾರರೆನ್ನಲಾಗುತ್ತದೆ. ಆದರೆ ಜಾತಿವಾದವನ್ನು ಅತಿ ಹೆಚ್ಚಾಗಿ ಮನಸ್ಸಿನಾಳಕ್ಕೆ ಇಳಿಸಿಕೊಂಡವರಲ್ಲಿ ವಿದ್ಯಾವಂತರೆ ಹೆಚ್ಚಾಗಿರುವುದು ದುರ್ದೈವವೆನಿಸುತ್ತದೆ. ಚುನಾವಣೆಯ ಹೊಸ್ತಿಲಲ್ಲಿರುವ ಬಹಳಷ್ಟು ರಾಜಕಾರಣಿಗಳು ಕೇವಲ ಸಾರ್ವಜನಿಕರನ್ನು ಉದ್ರೇಕಗೊಳಿಸಿ ಮತ ಪಡೆದುಕೊಳ್ಳುವ ಹೊಂಚುಗಾರಿಕೆಯನ್ನು ಕರಗತ ಮಾಡಿಕೊಳ್ಳುತ್ತಿದ್ದಾರೆ. ಚುನಾವಣೆ ಮುಗಿದ ನಂತರದಲ್ಲಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದಕ್ಕಾಗಿ ಮತ್ತು ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಿಸುವುದಕ್ಕಾಗಿ ಪ್ರಯತ್ನ ನಡೆಸಿದ ನಿದರ್ಶನಗಳು ಬಹಳಷ್ಟು ರಾಜಕಾರಣಿಗಳಲ್ಲಿ ಕಂಡು ಬರುವುದಿಲ್ಲ.

ಹಾಗಿದ್ದಲ್ಲಿ ನಾವೇನು ಕ್ರಮಕೈಗೊಳ್ಳಬಹುದು? ಯಾವ ಸಮಾಜದಲ್ಲಿ ಹಸಿವಿನ ಆಕಂದ್ರನವಿರುವದಿಲ್ಲವೋ, ಆರೋಗ್ಯ ರಕ್ಷಣೆಯ ಕುರಿತ ಆತಂಕಗಳಿರುವುದಿಲ್ಲವೊ, ಸಾರ್ವತ್ರಿಕವಾದ ಸಮಾನ ಹಾಗೂ ಸ್ವತಂತ್ರ ಶಿಕ್ಷಣದ ಬಗ್ಗೆ ಗೊಂದಲಗಳಿರುವುದಿಲ್ಲವೋ, ಅಂತಹ ಸಮಾಜ ಮಾತ್ರ ಮುಂದಾಲೋಚನೆಯ ತೀರ್ಮಾನಗಳಿಗೆ ಸನ್ನದ್ಧವಾಗಲು ಸಾಧ್ಯವಿರುತ್ತದೆ. ದೇಶದಲ್ಲಿ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದ ನಂತರ ದೇಶಾದ್ಯಂತ ಉಚಿತವಾಗಿ ಅಥವಾ ಒಂದೆರಡು ರೂಪಾಯಿಗಳಂತೆ ಅಕ್ಕಿಯನ್ನು ಬಿಪಿಎಲ್ ಕುಟುಂಬಗಳಿಗೆ ಪೂರೈಸಲಾಗುತ್ತಿದೆ. ಆದರೆ ಇಂದಿಗೂ ಅರ್ಹ ಬಡ ಕುಟುಂಬಗಳು ನೂರಕ್ಕೆ ನೂರರಷ್ಟು ಪಡಿತರ ಚೀಟಿಗಳನ್ನು ಪಡೆದುಕೊಂಡಿದೆ ಎಂದು ಹೇಳಲು ನಮ್ಮ ದೇಶದ ಯಾವ ಸರ್ಕಾರಗಳಿಗೂ ಧೈರ್ಯವಿರುವುದಿಲ್ಲ. ಈ ದೇಶದ ಜನಸಾಮಾನ್ಯನ ಆರೋಗ್ಯವಂತೂ ಗಾಳಿಗೆ ತೆರೆದಿಟ್ಟ ದೀಪದಂತಾಗಿದೆ. ಪ್ರತಿಯೊಂದು ಕುಟುಂಬದ ಆರೋಗ್ಯ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಬದ್ಧತೆಯನ್ನು ಜನಸಾಮಾನ್ಯರ ತೆರಿಗೆ ಹಣದಿಂದ ಲಕ್ಷಾಂತರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸುವ ಯಾವ ಸರಕಾರಗಳೂ ವಹಿಸಿಕೊಳ್ಳಲು ಮುಂದಾಗದಿರುವುದು ದುರದೃಷ್ಟಕರ. ಇನ್ನು ಶಿಕ್ಷಣದ ವಿಚಾರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಕಣ್ಣು ಕೊರೆಸುವ ಆಡಂಬರದ ಪ್ರತಿಫಲನಕ್ಕೆ ಸರಕಾರಿ ಶಾಲೆಗಳು ಬಾಗಿಲು ಮುಚ್ಚಿಕೊಳ್ಳಲೇಬೇಕಾಗಿದೆ. ಇಂತಹ ಮೂಲ ಸವಾಲುಗಳನ್ನು ಮುಂದಿಟ್ಟುಕೊಂಡು ಚುನಾವಣೆಯ ದೊಂಬರಾಟ ನೋಡಲು ಸಿದ್ಧನಾಗುವ ಜನಸಾಮಾನ್ಯನ ಕಣ್ಣುಗಳು ಹೆಂಡ, ಕುರುಡು ಕಾಂಚಾಣ ಹಾಗೂ ಹುಟ್ಟಡಗಿಸುವ ಗೂಂಡಾಗಿರಿಗೆ ಮರುಳಾಗಿ ಮೌನವಾಗಲೇಬೇಕಲ್ಲವೇ? ಇದರೊಂದಿಗೆ ಇನ್ನೊಂದು ದೊಡ್ಡ ಆತಂಕವೆಂದರೆ ಜಾಣರ ಮತ್ತು ಸ್ವಾವಲಂಬನೆಯುಳ್ಳವರ ದಿವ್ಯ ಮೌನ. ಚುನಾವಣೆಯ ಸಂದರ್ಭದಲ್ಲಿ ಕನಿಷ್ಠ ಕೆಲ ನಿಮಿಷಗಳಷ್ಟು ಮತಗಟ್ಟೆಯ ಮುಂದಿನ ಕ್ಯೂನಲ್ಲಿ ನಿಂತು ಮತಚಲಾಯಿಸುವಷ್ಟು ಕರ್ತವ್ಯ ಪ್ರಜ್ಞೆಯೂ ಕೆಲವರಲ್ಲಿಲ್ಲದಿರುವುದು. ಹಾಗಿದ್ದರೆ ಈ ದೇಶದ ಭವಿಷ್ಯವನ್ನು ಸದ್ಯಕ್ಕೆ ನಿರ್ಧರಿಸುವವರು ಯಾರು? ಒಳ್ಳೆಯವರ ಮೌನವೇ ಅಥವಾ ಕೆಟ್ಟವರ ಅಟ್ಟಹಾಸವೇ?